ನೋಟಿಫಿಕೇಷನ್.

ತಾರೀಖು 26ನೆ ಜನವರಿ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನೆಯನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ನಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉಡಿಯಾರ್ಡ್	25—2—07	ಮತ್ತಿನಾಟಾ	50	1,000	ಹೆಚ್ಚಿನ ಷರತ್ತು.
			ಸಾಗ್ವಾನಿನಾಟಾ	650	25,000	
			ಡಿಟೋ ತುಂಡುಗಳು	400	5,000	
			ಹೊನ್ನೆನಾಟಾ	50	1,000	
2	ನಂಜನಗೂಡು ಡಿಪೋ	26—2—07	ಸಾಗ್ವಾನಿನಾಟಾ	150	4,000	
			ಡಿಟೋ ತುಂಡುಗಳು	150	3,000	
			ಹೊನ್ನೆನಾಟಾ	100	1,500	
			ಬೀಜೆನಾಟಾ	100	1,500	

ಹರಾಜು ಷರತ್ತು :—1895ನೆ ಇಸವಿ ಏಪ್ರಿಲ್ ತಾರೀಖು 23ನೆ ಮುರ್ಕುಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವ 1895ನೆ ಇಸವಿ ಮಾರ್ಚಿ 15ನೆ ಮುರ್ಕುಂ ನಂಬರ್ 15229—R. F. 155—92ನೆ ನೋಟಿಫಿಕೇಷನ್ ನೋಡಬೇಕು.

ಎಂ. ಜಿ. ರಾಮರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್.

ನೋಟಿಸ್.

ಇದರಿಂದ ತಿಳಿಯಪಡಿಸುವದೇನಂದರೆ :—1907ನೆ ಇಸವಿ ಫೆಬ್ರವರಿ 23ನೆ ತಾರೀಖಿನ ದಿವಿ 11 ಘಂಟೆಗೆ ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ಡಿವೀರ್ಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತುರ್ವೇಕೆರೆ ಸಬ್ ತಾಲ್ಲೂಕಿನಲ್ಲಿ ಇರುವ ಜೋಡಿ ಹರಿಜನ ಹಳ್ಳಿ ಗ್ರಾಮವನ್ನು ಸರಕಾರಕ್ಕೆ ಬರಬೇಕಾದ ರೆವಿನ್ಯೂ ಕಂದಾಯದ ಬಾಕಿಗೋಸ್ಕರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

N. B.—ಹೆಚ್ಚಿಗೆ ವಿಷಯಕ್ಕಾಗಿ 1907ನೆ ಇಸವಿ ಜನವರಿ 17ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 15—16ನೆ ಸಂಪ್ರಟಗಳಲ್ಲಿ ನಮೂದಿರುತ್ತೆ.

ಎಂ. ಶ್ರೀನಿವಾಸಮೂರ್ತಿ,
ಫಾರ್ ಡಪ್ಯೂಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 5ನೆ ಜನವರಿ 1907.

ಸಕಲ ಜನಗಳಿಗೂ ತಿಳಿಯುವೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಅದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮೂಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ಸಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜಾಗ್ರತೆಮಲ್ಲಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪ್ರಾರಾ ಗ್ರಾನುಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯ್ತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜವಿನಾನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಮರುಹರಾಜು ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಿರ್ವಹಿಸುವ ಅಥವಾ ಜವಾಬಿನಲ್ಲಿ ಇನಗೆ ಹಕ್ಕು ಇಟ್ಟಿಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖಿಲ್ ಕಂಪಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಶರ್ಸರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯುವಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ಡೆಪ್ಯುಟಿ ಕಮಿಷನರವರು ಖಾಯಂಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪ್ಪಸೀಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು ಸದರೀ ಹರಾಜಿನಿಂದ ನುಕ್ಸಾನಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಆಗಾಪ್ತುತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ.	ಜೋಡೀದಾರರ ಹೆಸರು	ಅಂದಾಜು ಬೀಜವರಿ ರೂ. ಆ. ಪೈ.	ಅಂದಾಜು ಹುಟ್ಟುವ ಬೀಜವರಿ ರೂ. ಆ. ಪೈ.	ಸಾಲಿಯಾನಾ ಸರಕಾರಕ್ಕೆ ಕಿಸ್ತಿಗೊಜಬೇಕಾದ ಕಿಸ್ತಿ ರೂ. ಆ. ಪೈ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜು ಮಾಡಲ್ಪಡತ್ತೋ ಅಂತಾ ಸರಕಾರದ ಕಂಪಾಯದ ಬಾಕಿ. ರೂ. ಆ. ಪೈ.	ಹರಾಜು ತಾರೀಖು
ಹಾಸನ	ಅರಸೀಕೆರೆ ತಾಲ್ಲೂಕು	ಕೆಂದೂರು	ಜೋಡಿ ಸಮುದ್ರಕ್ಕೆ	ನಾರಣಾಚಾರಿ ದಾಸ್ಯರು 18 ಜನರು	ಪರಂಪೋಕು 331 32 ಖುಷ್ಕಿ ... 139 23 ತರಿ .. 140 24 ಬಾಗಾಯತು 0 23 ಜುಮ್ಲಾ .. 612 22	5 4 95 8 418 4 2 0 521 0	ಲೋಕಲ್ ಸೆಸ್ಸು ಕೇರಿ 278 9 0	343 3 9	1907ನೇ ಇಸ್ವಿ ಮಾರ್ಚಿ ತಾ॥ 18ನೇ ಸೋಮವಾರ ರವಿವಿ ॥ ಘಂಟೆ ೮॥ ಕ್ಕೂ ಕೆಂದೂರು ಕಛೇರಿಯಲ್ಲಿ ಈ ಹಾಸನ ಡಿಸ್ಟ್ರಿಕ್ಟಿನ ಅಧಿಕಾರಿಯವರು ಅಲ್ಲಿ ಹಾಜರಿರುವ ಜನಗಳಿಗೆ ಹರಾಜು ನಡಿಸುತ್ತಾರೆ.

ಷರಾ—ಜೋಡೀದಾರರುಗಳಿಂದಲಾಗಲಿ ಯಾ ಖಾಯಂಗುತ್ತಾದಾರರುಗಳಿಂದ ಆಗಲಿ ಖಾಸ್ತೆ ಮೂಲಕ ಇವರುಗಳಿಗೆ ಹಿಂದೆಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಪಾಸಿ ಹಿಡುವಳಿಗಾಗಲಿ ಮತ್ತಾವ ಸಂಬಂಧಗಳಿಗಾಗಲಿ ಸದರಿ ಹರಾಜು ಬಳಪಟ್ಟಿರುವದಿಲ್ಲ.

ಎಂ. ಎ. ನಾರಾಯಣಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.
ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ತಾರೀಖು 17—4—1867ನೆ ಮತ್ತು 6ನೆ ನಂಬರು ಭೂವಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆ ವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇವರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ತಾಲ್ಲೂಕು ಹುಣಸೆಕೊಪ್ಪದ ಗ್ರಾಮದಲ್ಲಿ ಸರಕಾರಿ ಜಾಗದಲ್ಲಿರುವ ಬಂದು ಹುಣಸೆಮರದ ಬುಡವೆಲ್ಲಿ ಈ ಕೆಳಗೆ ನಮೂದಾಗಿರುವ ಸುಮಾರು 909 ರೂಪಾಯಿ 8 ಆಣೆ ಬೆಲೆ ಉಳ್ಳ ನಿಧಿಯು ತಾರೀಖು 16-9-06ರಲ್ಲಿ ಶಿಕ್ಕಿತು.

ಶಿಕ್ಕಿದ ವಿವರ.

	ಅಂದಾಜು ಬೆಲೆ. ರೂ. ಆ. ಪೈ.
38 ಚಿನ್ನದ ನಾಣ್ಯಗಳು	338 0 0
ಬಂದು ಭಂಗಾರದ ಸರಿಗೆ	105 0 0